ಸಾಲ ಮಾಡುವುದು ಅಂದರೆ ಮೊದಲಿನಿಂದಲೂ ನಾನು ತೀರ ಹಿಂಜರಿಯುವ ವ್ಯಕ್ತಿಯೇ ಹೌದು. ಇಷ್ಟಕ್ಕೂ ಆಗ ಅಂದರೆ, ನಾನಿನ್ನೂ ಖಚಿತವಾದ ಆದಾಯವಿಲ್ಲದೆ ಪರದಾಡುತ್ತಿದ್ದ ಕಾಲದಲ್ಲಿ ಯಾರು ತಾನೆ ನನಗೆ ಸಾಲ ಕೊಡಲು ಮನಸ್ಸು ಮಾಡುತ್ತಿದ್ದರು? ಸಾಲ ಕೊಡಬೇಕಾದರೆ, ಸಾಲಿಗನು ಈ ವ್ಯಕ್ತಿಯ ಆದಾಯದ ಮೂಲ ಯಾವುದು? ತೆಗೆದುಕೊಂಡ ಸಾಲವನ್ನು ಹಿಂದಿರುಗಿಸುವ ಛಾತಿ ಇದೆಯೊ? ಇಲ್ಲ, ಏನಾದರೂ ಘನವಾದ ಆಸ್ತಿ ಇದೆಯೊ? ಅಂತ ನೋಡುವುದು ಸ್ವಾಭಾವಿಕ ತಾನೆ? ನನ್ನನ್ನೂ ಅದೇ ದೃಷ್ಟಿಯಿಂದ ನೋಡುತ್ತಿದ್ದುದು ಸಹಜವೇ ಆಗಿತ್ತೆನ್ನಿ. ಹಾಗೆ ನೋಡಿದಾಗ, ನನಗೆ ಬರುತ್ತಿದ್ದ ಆದಾಯ ಅನಿಯತವಾಗಿತ್ತು. ಅದರಿಂದ, ಜೀವನೋಪಾಯ ಮಾಡುವುದೇ ತುದಿಗಟ್ಟಾಗಿತ್ತು. ಇನ್ನು ಸಾಲ ತೀರಿಸುವ ಮಾತೆಲ್ಲಿ ಬಂತು? ಆಸ್ತಿ ವಿಷಯಕ್ಕೆ ಬಂದರೆ 'ಆಸ್ತಿ ನಾಸ್ತಿ'. ಹಾಗಾಗಿಯೇ, ಹಿಂದೊಮ್ಮೆ ಒಬ್ಬ ಸಾಲಿಗ ಧಣಿಯನ್ನು ಐದು ಸಾವಿರ ರೂಪಾಯಿ ಸಾಲ ಕೇಳಿದಾಗ, ಅವನು ನನ್ನ ಸೂತ್ರ ಗೋತ್ರವನ್ನೆಲ್ಲ ಆಮೂಲಾಗ್ರವಾಗಿ ಸಂಗ್ರಹಿಸಿ, ಇವನಿಗೆ 'ಸಾಲ ಕೊಟ್ಟವನು ಕೋಡಂಗಿ, ಈಸ್ಕೊಂಡೋನು ಈರಭದ್ರ' ಅಂತ ನಿಶ್ಚಯಿಸಿ, ಇನ್ನೊಂದು ದಿನ ಸಿಕ್ಕಾಗ, 'ನೋಡಿ... ಇವರೆ... ಈಗ್ಯಾಕೊ ಹಣ ಒದಗಿ ಬರ್ತಾಯಿಲ್ಲ, ದಯವಿಟ್ಟು ಬೇಸರ ಮಾಡ್ಕೊಬೇಡಿ, ಇನ್ನೊಬ್ಬರ ಹತ್ರ ಪ್ರಯತ್ನಿಸಿ' ಅಂತ ಕಡ್ಲೆ ತಿಂದು ಕೈ ತೊಳೆದುಕೊಂಡರು. ಆದರೆ, ಇನ್ನೊಬ್ಬ ಮಹನೀಯರನ್ನು ಕೇಳಿದಾಗ, ಅವರು 'ನಿಮಗೆ ಸಾಲ ಏನೊ ಕೊಡ್ಬಹುದು, ಆದರೆ ಹೇಗೆ ತೀರಿಸ್ತೀರಿ?' ಅಂತ ಖುಲ್ಲ ಖುಲ್ಲ ಹೇಳಿ ಇಲ್ಲ ಇಲ್ಲ ಅಂದರು. ಹಾಗಾಗಿಯೇ ನಾನು, 'ಮಂದಲಿಗೆ ಇದ್ದಷ್ಟು ಕಾಲು ಚಾಚು, ಇಲ್ಲದಿದ್ರೆ ಅಲ್ಲೇ ಕೊಕ್ಕರಿಸ್ಕೊ' ಎಂಬ ನಾಣ್ಣುಡಿಯಂತೆ ಸಾಧ್ಯವಾದಷ್ಟು ಪಾಲಿಸುತ್ತಾ ಬಂದಿರುವೆನಾದ್ದರಿಂದ, ಇಂದು ನನ್ನನ್ನು ಸಾಲಿಗನು ಮನೆಯ ಬಾಗಿಲಿಗೆ ಬಂದು ಅಥವಾ ಬೀದಿಯಲ್ಲಿ ಅಡ್ಡಗಟ್ಟಿ 'ಸಾಲದ ದುಡ್ಡು ಕೊಡು' ಅಂತ ಕೇಳುವುದಿಲ್ಲವಾದರೂ, ಈ ನಡುವೆಯೆ ಅತ್ಯನಿವಾರ್ಯವಾಗಿ ಸಾಲಮಾಡಿ, ಗೊಬ್ಬರ ನೀರು ಬೇಡದೆ, ರಾತ್ರಿ

